ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು–560065

*** ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ ***

ದಿನಾಂಕ: 4.11.2016

ಚಿಕ್ಕಬಳ್ಳಾಪುರ ಜಿಲ್ಲೆಗೆ ಸೀಮಿತವಾಗಿದೆ

ಈ ವಾರದ ಮುನ್ಸೂಚನೆ (ದಿನಾಂಕ 5.11.16–09.11.16 ವರೆಗೆ)

	5.11.2016	6.11.2016	7.11.2016	8.11.2016	9.11.2016
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	30	30	30	29	29
ಕನಿಷ್ಠ ಉಷ್ಣಾಂಶ (ಡಿ.ಸೆ.)	19	18	17	17	16
ಮೋಡ (ಪ್ರಮಾಣ)	6	2	7	6	1
ಆರ್ದ್ರತೆ ೭.೨೦ ಬೆ (ಶೇ)	80	70	66	71	84
ಆರ್ದ್ರತೆ ೨.೨೦ ಮ (ಶೇ)	47	42	41	37	34
ಗಾಳಿಯ ವೇಗ (ಕಿ.ಮಿ/ಗಂಟೆಗೆ)	9	8	7	6	5
ಗಾಳಿಯ ದಿಕ್ಕು (ಡಿಗ್ರಿ)	280	290	130	50	110

ಮುಂಬರುವ 5 ದಿನಗಳಲ್ಲಿ ಮಳೆ ಆಗುವ ಸಾಧ್ಯತೆ ಕಡಿಮೆಯಿದೆ. ದಿನದ ಗರಿಷ್ಠ ಉಷ್ಣಾಂಶ **29.0–30.0° ಸೆ** ಮತ್ತು ಕನಿಷ್ಠ **16.0-19.0° ಸೆ** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **66-84 %** ಇದ್ದು ಮಧ್ಯಾಹ್ನ **34-47 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **5-9** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಬೆಳೆಗಳು	ಹವಾಮಾನ ಆಧಾರಿತ ಕೃಷಿ ಸಲಹೆಗಳು
ಸಾಮಾನ್ಯ	➢ ಕಳೆದೆರಡು ವಾರಗಳಿಂದ ನೀರಿನ ಅಭಾವದಿಂದ ಬೆಳೆಗಳು ಒಣಗುತ್ತಿದ್ದು ಒಂದು ಬಾರಿ ರಕ್ಷಣಾತ್ಮಕ ನೀರಾವರಿಯನ್ನು ಬೆಳೆಗಳಿಗೆ ಕೊಡಿ. ➢ ಮಳೆ ಬಂದ ತಕ್ಷಣ ದ್ವಿದಳ ದಾನ್ಯಗಳನ್ನು ಬಿತ್ತನೆ ಮಾಡಿ, ಅಲಸಂದೆ ಬೆಳೆಯಲ್ಲಿ ಸಿ–152 ಮತ್ತು ಕೆ.ಎಮ್–5, ಟಿ.ವಿ.ಎಕ್ಸ್–944. ಅಥವಾ ತರಕಾರಿಗಾಗಿ ಪಿ.ಕೆ.ಬಿ–4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು. ➢ ಅವರೆ: ಎಚ್.ಎ–3 ಮತ್ತು 4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು. ➢ ಸೂರ್ಯಕಾಂತಿ: ಮಾರ್ಡೆನ್, ಕೆ.ಬಿ.ಎಸ್.ಹೆಚ್–1,41,44 ಮತ್ತು 52 ➢ ಹುಚ್ಚೆಳ್ಳು: ಕೆ.ಬಿ.ಎನ್–1, ನಂ–71
ತೊಗರಿ	➢ ಗೂಡುಮಾರು ಹುಳುವಿನ ಭಾದೆಯನ್ನು ನಿಯಂತ್ರಿಸಲು ಮಿಥೋಮಿಲ್–40 ಎಸ್.ಪಿ. 2 ಗ್ರಾಂ/ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ. ➢ ಕಾಯಿ ಕೊರಕ ಬಾಧೆ ಕಂಡು ಬಂದಲ್ಲಿ, ಇಂಡಾಕ್ಸಿಕಾರ್ಬ್ 0.5 ಮೀ.ಲಿ/ಲೀ ಅಥವಾ ಸ್ಪೈನೋಸ್ಯಾಡ್ 0.15 ಮೀ.ಲಿ/ಲೀ ಅಥವಾ ಕ್ಲೋರೋಪೈರಿಫಾಸ್ 2 ಮೀ.ಲಿ/ಲೀ ಸಿಂಪಡಿಸಿ ➢ ಸೊರಗು ರೋಗದ ಹಟೋಟಿಗೆ ಕಾಬೆನ್‌ಡೈಜಿಮ್ 50 ಡ್ಬ್ಲ್ಯೂ.ಪಿ. 2 ಗ್ರಾಂ/ಪ್ರತಿ ಲೀ. ನೀರಿನಲ್ಲಿ ಬೆರೆಸಿ ಗಿಡದ ಬುಡಕ್ಕೆ ಸುರಿಯಿರಿ. ➢ ಸೊರಗು ರೋಗ ತಗುಲಿದ ಗಿಡಗಳನ್ನು ಬೇರ್ಪಡಿಸಿ ಸುಟ್ಟುಹಾಕಿ.

ರಾಗಿ	➢ ಮಳೆ ಬಂದ ಕೂಡಲೇ, ಪ್ರತಿ ಹೇಕ್ಟರ್‌ಗೆ 12.5 ಕಿ.ಗ್ರಾಂ ಸಾರಜನಕವನ್ನು ಮೇಲು ಗೊಬ್ಬರವಾಗಿ ಉಪಚರಿಸಿ. ➢ ಕಡಿಮೆ ಅವಧಿಯ ರಾಗಿ ತಳಿಗಳಾದ ಜಿಪಿಯು– 26, 45, 48 ಮತ್ತು ಇಂಡಾಫ್–7,9,15 ತಳಿಗಳನ್ನು ಬಿತ್ತನೆ ಮಾಡಬಹುದು. ➢ ರಾಗಿಯಲ್ಲಿ ಬೆಂಕಿ ರೋಗ ಕಂಡು ಬಂದಲ್ಲಿ ಮ್ಯಾಂಕೊಜೇಬ್ @ 2 ಗ್ರಾಂ/ಲೀ ಅಥವಾ ಜೇನಾಬ್ @ 2.5 ಗ್ರಾಂ/ಲೀ ಸಿಂಪಡಿಸಿ.
ಮೆಕ್ಕೆಜೋಳ	➢ ಕಟಾವಿಗೆ ಬಂದಿರುವ ಮೆಕ್ಕೆಜೋಳವನ್ನು ಕಟಾವು ಮಾಡಿ.
ಶೇಂಗಾ/ನೆಲಗಡಲೆ	➢ ಕಟಾವಿಗೆ ಬಂದಿರುವ ನೆಲಗಡಲೆಯನ್ನು ಕಟಾವು ಮಾಡಿ.
ಜಾನುವಾರು	
ಹೈನುಗಾರಿಕೆ	➢ ಜಂತು ಹುಳುಗಳ ನಿವರಣೆಗಾಗಿ ಪಶುವೈದ್ಯರ ಸಲಹೆ ಪಡೆದು ಸೂಕ್ತವಾದ ಜಂತು ನಿವಾರಕ ಔಷದಿಯನ್ನು ಕರು ಹುಟ್ಟಿದ 7ನೆಯ ದಿನ, 1 ನೆಯ ತಿಂಗಳು , 6 ನೆಯ ತಿಂಗಳು ತಪ್ಪದೆ ಹಾಕಬೇಕು. ➢ ಹಾಲು ಕೊಡುವ ಪ್ರಾಣಿಗಳಿಗೆ ಅವು ಕೊಡುವ ಹಾಲಿನ ಆದಾರದ ಮೇಲೆ ಆಹಾರವನ್ನು ಕೋಡಬೇಕು.
ರೇಷ್ಮೆ ಸಾಕಾಣಿಕೆ	➢ ಊಜಿನೊಣದಿಂದ ರೇಷ್ಮೆ ಹುಳುವನ್ನು ಸಂರಕ್ಷಿಸಲು ವಿನ್ಯಾಸಗೊಳಿಸಿದ ಊಜಿ ನಿಯಂತ್ರಣ ಬಲೆ ಬಳಸಬೇಕು. ➢ ಊಜಿ ನಿಯಂತ್ರಿಸುವ ರಾಸಾಯನಿಕಗಳಾದ ಊಜಿ ಗುಳಿಗೆ ಶಿಫಾರಸ್ಸು ಮಾಡಿದಂತೆ ಬಳಸಿ ನೀರಿನಲ್ಲಿ ಬೆರೆಸಿ ಕಿಟಕಿ ಬಾಗಿಲುಗಳ ಬಳಿ ಊಜಿ ಹಾರಾಡುವ ಜಾಗದಲ್ಲಿಡಬೇಕು.

ನೋಡಲ್ ಅಧಿಕಾರಿ:
ಕೃ.ವಿ.ವಿ, ಜಿ.ಕೆ.ವಿ.ಕೆ
ಬೆಂಗಳೂರು